ಟೈರು ಮತ್ತು ಟ್ಯೂಬುಗಳನ್ನು ಅದರ ತಯಾರಕರಿಂದ ಮೂರು ತಿಂಗಳಿಗೊಮ್ಮೆ ಟೆಂಡರ್ ಕರೆದು ತೀರ್ಮಾನಿಸಲಾಗುವುದು. ಇನ್ನಿತರ ಬಿಡಿಭಾಗಗಳನ್ನು ಕ.ರಾ.ರ.ಸಾ. ಸಂಸ್ಥೆ ಮಾರಕ ಉದ್ಯಮಗಳಿಂದಲೂ ನಮ್ಮಲ್ಲಿ ದಾಖಲು ಮಾಡಿದ ಸಣ್ಣ ಪ್ರಮಾಣದ ಕೈಗಾರಿಕೆಗಳಿಂದಲೂ ಮತ್ತು ರಾಜ್ಯದಲ್ಲಿನ ಕೈಗಾರಿಕೆ ಸಂಸ್ಥೆ. ದರ ಸಂವಿದ ಸಂಸ್ಥೆಗಳು ಜೊತೆ ತುಲನೆ ಮಾಡಿ ಖರೀದಿಸಲಾಗುವುದು. ಇನ್ನಿತರ ಟೆಂಡರ್ ಬಿಡಿಭಾಗಗಳಿಗೆ ಕೋಟೇಷನ್ ಕರೆದು ಖರೀದಿಯನ್ನು ನಿರ್ಧರಿಸಲಾಗುವುದು.

ಇ) ಕ.ರಾ.ರ.ಸಾ. ಸಂಸ್ಥೆಯು ಇನ್ನಿತರ ಸಂಸ್ಥೆಗಳಾದ ಕೆ.ಎಸ್.ಐ.ಎಂ.ಸಿ., ಖರೀದಿ ಮತ್ತು ಉಗ್ರಾಣ ಇಲಾಖೆ, ಡಿ.ಜಿ.ಎಸ್.ಡಿ. ಯಲ್ಲಿ ಅಧಿಕೃತವಾಗಿ ದಾಖಲು ಮಾಡಿದ ಸಂಸ್ಥೆಗಳಿಂದಲೂ ಅವುಗಳು ಟೆಂಡರ್ ಕರೆದಾಗ ಭಾಗವಹಿಸಿದಲ್ಲಿ ಪರಿಗಣಿಸುವುದು.

ಬೆಂಗಳೂರು ನಗರ ಸಾರಿಗೆಯಲ್ಲಿ ಕಾರ್ಯಾಚರಣೆಯಲ್ಲಿರುವ ಡಬಲ್‌ಡೆಕರ್ ವಾಹನಗಳ ಬಗ್ಗೆ

1772. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರ ಸಾರಿಗೆಯಲ್ಲಿ ಕಾರ್ಯಾಚರಣೆಯಲ್ಲಿರುವ ಡಬಲ್ ಡೆಕರ್ ವಾಹನಗಳ ಸಂಖ್ಯೆ ;

ಆ) 1991ನೇ ಸಾಲಿನಲ್ಲಿ ಖರೀದಿಸಿದ ಡಬಲ್ ಡೆಕರ್‌ಗಳ ಸಂಖ್ಯೆ :

ಇ) ಡಬಲ್‌ಡೆಕರ್ ವಾಹನಗಳು ಹಳೆಯದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಬದಲಾವಣೆಗೆ ತೆಗೆದುಕೊಂಡ ಕ್ರಮ ;

ಉ) 1992ನೇ ಸಾಲಿನಲ್ಲಿ ಎಷ್ಟು ಡಬಲ್ ಡೆಕರ್ ವಾಹನಗಳನ್ನು ಸೇರ್ಪಡಿಸುವ ಪ್ರಸ್ತಾವನೆ ಇದೆ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) 22 ಅನುಸೂಚಿಗಳಿಗೆ 27 ವಾಹನಗಳಿವೆ.

ಆ) 1991ನೇ ಸಾಲಿನಲ್ಲಿ ಡಬಲ್ ಡೆಕರ್‌ಗಳನ್ನು ಖರೀದಿಸಿರುವುದಿಲ್ಲ.

ಇ) ಹೌದು, ಕೆಲವು ವಾಹನಗಳು ಹಳೆಯದಾಗಿರುತ್ತವೆ.

ಈ) ವಾಹನಗಳನ್ನು ಹಂತಹಂತವಾಗಿ ತೆಗೆದು, ರದ್ದುಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ.

ಉ) 1992ನೇ ಸಾಲಿನಲ್ಲಿ ಡಬಲ್‌ಡೆಕರ್ ವಾಹನಗಳನ್ನು ಖರೀದಿಸುವ ಪ್ರಸ್ತಾವನೆ ಇಲ್ಲ.